ಡಿ.ಡಬ್ಲೂ-೧

ದಿ: ೧೯-೦೨-೨೦೨೬ ರಂದು ಆರೋಪಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

ಹೆಸರು : ಶ್ರೀನಿವಾಸ್
ತಂದೆಯ ಹೆಸರು : ಮುನಿವೆಂಕಟಪ್ಪ
ವಯಸ್ಸು : ೪೮ ವರ್ಷ
ಉದ್ಯೋಗ : ವ್ಯವಸಾಯ
ವಾಸಸ್ಥಳ : ದೊಡ್ಡದುನ್ನಸಂದ್ರ

ಮುಖ್ಯ ವಿಚಾರಣೆ : ಆರೋಪಿ ಪರವಾಗಿ ಶ್ರೀಯುತ ಕೆ.ಎನ್. ವಕೀಲರಿಂದ.

ದಿ: ೨೯.೦೫.೨೦೧೯ ರಂದು ನನ್ನ ಮಗಳ ಮದುವೆಯನ್ನು ಮಾಡಿರುತ್ತೇನೆ. ಸದರಿ ಮದುವೆಗೆ ಸಂಬಂಧಿಸಿದ ಬಟ್ಟೆಗಳನ್ನು ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿಯ ದೊಡ್ಡದುನ್ನಸಂದ್ರ ಕ್ರಾಸ್ ಬಳಿ ಇರುವ ದಿಲೀಪ್ ಚೌದ್ರಿರವರ ಮಾಲೀಕತ್ವದ ಕೃಷ್ಣ ಟೆಕ್ಸಟೈಲ್ ಅಂಗಡಿಯಲ್ಲಿ ಖರೀದಿಸಿರುತ್ತೇನೆ ಮತ್ತು ಬಂಗಾರದ ಆಭರಣಗಳನ್ನು ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿಯ ದೊಡ್ಡದುನ್ನಸಂದ್ರ ಕ್ರಾಸ್ ಬಳಿ ಇರುವ ಪಿರ್ಯಾದಿದಾರರ ಮಾಲೀಕತ್ವದ ಕೃಷ್ಣ ಜ್ಯುಲರ್ಸ್ ಅಂಗಡಿಯಲ್ಲಿ ಖರೀದಿಸಿರುತ್ತೇನೆ. ಆ ರೀತಿ ಬಟ್ಟೆ ಮತ್ತು ಆಭರಣಗಳನ್ನು ಖರೀದಿಸಿದ ಒಂದು ವರ್ಷದ ನಂತರ ನನಗೆ ದೂರವಾಣಿ ಕರೆ ಮಾಡಿ ಪೊ.ಠಾಣೆಗೆ ಬರುವಂತೆ ಸೂಚಿಸಿರುತ್ತಾರೆ. ಅದರಂತೆ ನಾನು ಅನುಗೊಂಡನಹಳ್ಳಿ ಪೊ.ಠಾಣೆಗೆ ಭೇಟಿ ನೀಡಿರುತ್ತೇನೆ ಮತ್ತು ಸದರಿ ಪೊ.ಠಾಣೆಯಲ್ಲಿ ನನ್ನನ್ನು ಸಂಜೆ ೬ ರಿಂದ ರಾತ್ರಿ ೧೦ ಗಂಟೆಯವರೆಗೆ ಕುಳ್ಳಿರಿಸಿಕೊಂಡು ಹಿಂಸೆ ನೀಡಿರುತ್ತಾರೆ. ಸದರಿ ಪೊ.ಠಾಣೆಯಲ್ಲಿ ನನ್ನ ಕಡೆಯಿಂದ ಒಂದು ಬಿಳಿ ಖಾಲಿ ಹಾಳೆಯ ಮೇಲೆ ಸಹಿಯನ್ನು ಮಾಡಿಸಿಕೊಂಡು ಆಂಧ್ರ ಬ್ಯಾಂಕಿನ ನನ್ನ ಖಾತೆಯ ಸಹಿ ಮಾಡಿದ ಮೂರು ಚೆಕ್ಕುಗಳನ್ನು ಪಡೆದುಕೊಂಡಿರುತ್ತಾರೆ. ತದನಂತರ ನನ್ನನ್ನು ಪೊ.ಠಾಣೆಯಿಂದ ಕಳುಹಿಸಿರುತ್ತಾರೆ. ನಂತರ ನಾನು ಮನೆಗೆ ಬಂದು ವಕೀಲರಿಗೆ ದೂರವಾಣಿ ಕರೆ ಮಾಡಿ ನಡೆದ ವಿಚಾರವನ್ನು ತಿಳಿಸಿರುತ್ತೇನೆ. ನಂತರ ನಾನು ಪಿರ್ಯಾದಿ ಮೇಲೆ ದೂರನ್ನು ನೀಡಿ ಸಿವಿಲ್ ದಾವೆಯನ್ನು ದಾಖಲಿಸಿರುತ್ತೇನೆ. ನಾನು ಸದರಿ ಪಿರ್ಯಾದಿದಾರರ ವಿರುದ್ದ ದಾಖಲಿಸಿದ ಸಿವಿಲ್ ದಾವೆ ಇನ್ನು ತನಿಖೆಗೆ ಬಾಕಿ ಇರುತ್ತದೆ. ಪಿರ್ಯಾದಿದಾರರು ವಕೀಲರ ಮೂಲಕ ನೀಡಿದ ನೋಟಿಸ್ಸಿಗೆ ಪ್ರತ್ಯುತ್ತರವನ್ನು ನೀಡಿರುತ್ತೇನೆ. ನಾನು ಪಿರ್ಯಾದಿ ಮತ್ತು ದಿಲೀಪ್ ಚೌದ್ರಿ ರವರ ಅಂಗಡಿಯಿಂದ ಖರೀದಿಸಿದ ವಸ್ತುಗಳಿಗೆ ಹಣವನ್ನು ಸಂಪೂರ್ಣವಾಗಿ ಪಾವತಿಸಿರುತ್ತೇನೆ. ನಾನು ಪಿರ್ಯಾದಿದಾರರ ಬಳಿ ಬಟ್ಟೆ ಮತ್ತು ಆಭರಣಗಳನ್ನು ಖರೀದಿಸಿದ ಕುರಿತು ರಸೀದಿ ನೀಡುವಂತೆ ಕೇಳಿದಾಗ ೧೦% ಹೆಚ್ಚುವರಿಯಾಗಿ ತೆರಿಗೆ ನೀಡಬೇಕೆಂದು ತಿಳಿಸಿ ರಸೀದಿಯನ್ನು ನೀಡಿರುವುದಿಲ್ಲ. ನಾನು ಪಿರ್ಯಾದಿದಾರರಿಗೆ ಯಾವುದೇ ಹಣ ನೀಡಲು ಬಾಕಿ ಇರುವುದಿಲ್ಲ. ಪಿರ್ಯಾದಿದಾರರು ನನ್ನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ.

ದಿ: ೦೯.೦೧.೨೦೨೧ ರಂದು ಪಿರ್ಯಾದಿದಾರರ ಪರ ವಕೀಲರಿಗೆ ನೀಡಿದ ಪ್ರತ್ಯುತ್ತರವನ್ನು ಹಾಜರುಪಡಿಸಿದ್ದು ನಿ.ಡಿ.೩ ಎಂದು, ನಿ.ಡಿ.೩ ಕಳುಹಿಸಿದ ಕುರಿತು ಅಂಚೆ ರಸೀದಿಯನ್ನು ಹಾಜರುಪಡಿಸಿದ್ದು ನಿ.ಡಿ.೪ ಎಂದು, ನಿ.ಡಿ.೩ ಜಾರಿಯಾದ ಕುರಿತು ಅಂಚೆ ಸ್ವಿಕೃತಿ ಪತ್ರವನ್ನು ಹಾಜರುಪಡಿಸಿದ್ದು ನಿ.ಡಿ.೫ ಎಂದು, ದಿ: ೧೧.೧೧.೨೦೨೦ ರಂದು ಪಿರ್ಯಾದಿದಾರರ ವಿರುದ್ದ ನೀಡಿದ ಪೊಲೀಸ್ ಪಿರ್ಯಾದಿನ ಸ್ವಿಕೃತಿ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.೬ ಎಂದು ಗುರುತಿಸಲಾಯಿತು.  ಆದ್ದರಿಂದ ಪ್ರಸ್ತುತ ಪಿರ್ಯಾದನ್ನು ವಜಾಗೊಳಿಸಿ ನನ್ನನ್ನು ನಿರಪರಾಧಿ ಎಂದು ಘೊಷಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪಾಟೀ ಸವಾಲು: ಪಿರ್ಯಾದಿ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**

Case called out.
Accused is present.
Accused is examined as D.W.1 and marked Ex.D.3 to 6.
Counsel for the complainant prays time for cross examination of D.W.1.
For cross examination of D.W.1 by 06.03.2026.

**Prl. Civil Judge & JMFC.,**
**Hoskote**